# ಕರ್ನಾಟಕ ವಿಧಾನ ಸಭೆ
# KARNATAKA LEGISLATIVE ASSEMBLY

ಬುಧವಾರ ೨೬ನೇ ಡಿಸೆಂಬರ್ ೧೯೯೦, ಮಾರ್ಗಶಿರ ೫, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಎಸ್.ಎಂ. ಕೃಷ್ಣ)** ಅವರು ಪೀಠವನ್ನು ಅಲಂಕರಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ತಿದ್ದುಪಡಿಯ ಬಗ್ಗೆ ಮಾನ್ಯ ರಾಜೀವ್ ಗಾಂಧಿಯವರ ಬಳಿಗೆ ಒಂದು ನಿಯೋಗ ಹೋದಾಗ ಈ ತಿದ್ದುಪಡಿಗಳ ಬಗ್ಗೆ ಸರಿಯಾಗಿ ನನ್ನ ಗಮನಕ್ಕೆ ತಂದಿಲ್ಲವೆಂದು ಹೇಳಿರುತ್ತಾರೆ. ಶ್ರೀಮಾನ್ ಬಸವಲಿಂಗಪ್ಪನವರು ಈ ಒಂದು ತಿದ್ದುಪಡಿಗಳ ಬಗ್ಗೆ ತಿಳಿಸಿರತಕ್ಕಂಥದ್ದು ಸತ್ಯಕ್ಕೆ ದೂರವಾದಂಥ ಅನೇಕ ವಿಷಯಗಳನ್ನು ಈ ಸದನದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಈ ಒಂದು ತಿದ್ದುಪಡಿಗಳ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗದಂತೆ ಸೂಚನೆಗಳನ್ನು ಕೂಡ ಕೊಟ್ಟಿದ್ದಾರೆಂಬ ಮಾತು ಪತ್ರಿಕೆಗಳಲ್ಲಿಯೂ ಬಂದಿದೆ. ಆದ್ದರಿಂದ ಇದು ಒಂದು ನಗೆಪಾಟಲಾಗಬಾರದು. ಕಳೆದ ಕೆಲವಾರು ದಿವಸಗಳಿಂದ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತಿ ತಿದ್ದುಪಡಿಯ ಬಗ್ಗೆ ವಿಶೇಷವಾದ ಸದನವನ್ನು ಕರೆದ ಸಂದರ್ಭದಲ್ಲಿ, ಸದನದ ಅವರ ಪಕ್ಷದ ನಾಯಕರೇ ಇದು ಸರಿಯಿಲ್ಲವೆಂದು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರ ಈ ತಿದ್ದುಪಡಿಗಳಿಗೆ ವಿರುದ್ಧವಾದ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಅದು ಪತ್ರಿಕೆಗಳ ಮೂಲಕ ಹೇಳಿಕೆ ಬಂದಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸ್ಪಷ್ಟಪಡಿಸಬೇಕು ದಯವಿಟ್ಟು ತಿದ್ದುಪಡಿಯ ಬಗ್ಗೆ ಚರ್ಚೆಯಾದ ಮೇಲೆ ಇದು ಅನುಸ್ಥಾನಕ್ಕೆ ಬರುವುದಕ್ಕೆ ಅವರ ಅಧ್ಯಕ್ಷರು ಏನು ಹೇಳಿದರು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜೀವ್ ಗಾಂಧಿಯವರು ಹೇಳಿರುವ ಪ್ರಕಾರ ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ತೀರ್ಮಾನಿಸಿದೆಯೇ?

ಅಧ್ಯಕ್ಷರು : ಈ ವಿಚಾರಗಳನ್ನೆಲ್ಲ ಚರ್ಚೆಗೆ ತೆಗೆದುಕೊಂಡಾಗ ಪ್ರಸ್ತಾಪ ಮಾಡಿ. ಈಗ ಅರ್ಜಿಗಳನ್ನು ಒಪ್ಪಿಸುವುದು. ಶ್ರೀ ಕೆ. ಕುಶಾಲ 'ಶ್ರೀಮತಿ ಮೋಟಮ್ಮ' ಶ್ರೀ ಬಸವಂತ ರೆಡ್ಡಿ ಮೊಟಕಪಲ್ಲಿ ಅವರು;

## ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಬಸವ ರೆಡ್ಡಿ ಮೊಟಕಪಲ್ಲಿ : ಮಾನ್ಯ ಅಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ ರೈತರಿಗೆ ಹಾನಿಯುಂಟಾಗಿರುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

(ಗೊಂದಲ)